# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 979
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.12.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಮಂಡ್ಯದ ಮಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಹಾಲಿ ಇರುವ ತುರ್ತು ಚಿಕಿತ್ಸಾ ವಿಭಾಗ, Minor OT ಕೊಠಡಿಗಳು, CSSD (Central Sterile Supply Department) ತುಂಬಾ ಹಳೆಯದು ಮತ್ತು ಕಿರಿದಾಗಿರುವುದರಿಂದ ಈ ಕೊಠಡಿಗಳನ್ನು ತುರ್ತಾಗಿ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು; ಪ್ರಸ್ತುತ, ಈ ಕೊಠಡಿಗಳ ಸ್ಥಿತಿ ಹೇಗಿದೆ; (ಸಂಪೂರ್ಣ ವಿವರ ನೀಡುವುದು) | ಮಂಡ್ಯದ ಮಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಹಾಲಿ ಇರುವ ತುರ್ತು ಚಿಕಿತ್ಸಾ ವಿಭಾಗ, Minor OT ಕೊಠಡಿಗಳು, CSSD (Central Sterile Supply Department) ತುಂಬಾ ಹಳೆಯದು ಮತ್ತು ಕಿರಿದಾಗಿರುವುದರಿಂದ ಈ ಕೊಠಡಿಗಳನ್ನು ತುರ್ತಾಗಿ ಮೇಲ್ದರ್ಜೆಗೇರಿಸುವ ಸಂಬಂಧದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.<br>ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ಸಿಎಸ್ಎಸ್‌ಟಿ ಘಟಕವನ್ನು ಈ ಹಿಂದೆ ಜಿಲ್ಲಾಸ್ಪತ್ರೆ ಪ್ರಾರಂಭವಾದ ಸಮಯದಲ್ಲಿ ಸ್ಥಾಪಿಸಲಾಗಿತ್ತು. |
| (ಆ) | ಹಾಗೇ, ಮಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಲಾಂಡ್ರಿಗೆ ಅವಶ್ಯವಿರುವ ಯಂತ್ರಗಳು ತೀರಾ ಹಳೆಯದಾಗಿರುವುದರಿಂದ ಪ್ರತಿನಿತ್ಯ 900-1000ಕೆ.ಜಿ. ಬಟ್ಟೆ ಒಗೆಯಲು ಸಾಧ್ಯವಾಗುತ್ತಿಲ್ಲ. ಇದರಿಂದ ರೋಗಿಗಳಿಗೆ ಸ್ವಚ್ಛ ಬಟ್ಟೆಗಳನ್ನು ಸಕಾಲದಲ್ಲಿ ಒದಗಿಸಲು ಕಷ್ಟಸಾಧ್ಯವಾಗಿರುವುದರಿಂದ ಹೊಸ ಯಂತ್ರಗಳ ಖರೀದಿ ಮತ್ತು ಸಿವಿಲ್ ಕಾಮಗಾರಿಗಾಗಿ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಕ್ರಮವೇನು; | ಮಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಲಾಂಡ್ರಿಗೆ ಈ ಹಿಂದೆ ಅಳವಡಿಸಲಾಗಿದ್ದ ಉಪಕರಣಗಳು ಪ್ರಸ್ತುತ ಕೆಲಸ ನಿರ್ವಹಿಸುತ್ತಿದ್ದು, 500 ರಿಂದ 1000 ಕೆ.ಜಿ. ಬಟ್ಟೆಯನ್ನು ಸ್ವಚ್ಛಗೊಳಿಸುವುದಕ್ಕೆ ಚಾಲನೆಯಲ್ಲಿರುತ್ತವೆ. ಸದರಿ ಹೊಸ ಯಂತ್ರದ ಅವಶ್ಯಕತೆ ಬಂದಲ್ಲಿ, ಸದರಿ ಹೊಸ ಯಂತ್ರವನ್ನು ಆರ್ಥಿಕ ಸಂಪನ್ಮೂಲದ ಲಭ್ಯತೆಗೊಳಪಟ್ಟು ಈ ಟೆಂಡರ್ ಮುಖಾಂತರ ಖರೀದಿಸಲು ಕ್ರಮಕೈಗೊಳ್ಳಲಾಗುತ್ತದೆ. |
| (ಇ) | ಮಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಹೃದಯ ರೋಗ ಮತ್ತು Nephrologist ತಜ್ಞ ವೈದ್ಯರನ್ನು ನೇಮಕ ಮಾಡುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು; | ಮಿಮ್ಸ್ ಬೋಧಕ ಆಸ್ಪತ್ರೆಗೆ ಹೃದಯ ರೋಗ ಮತ್ತು Nephrologist ತಜ್ಞ ವೈದ್ಯರ ಹುದ್ದೆಗಳು ಸೃಜನೆಯಾಗದೇ ಇರುವ ಕಾರಣ ಆ ಹುದ್ದೆಗಳನ್ನು ನೇಮಕಾತಿ ಮಾಡಿರುವುದಿಲ್ಲ.<br>ಆದರೆ ಹುದ್ದೆ ಸೃಜನೆಯಾಗುವ ತನಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ರೋಗಿಗಳಿಗೆ ಚಿಕಿತ್ಸೆ ನೀಡಲು ಉದ್ದೇಶಿಸಲಾಗಿರುತ್ತದೆ. |

| | | |
|---|---|---|
| (ಈ) | ರೋಗಿಗಳ ಒತ್ತಡಕ್ಕನುಗುಣವಾಗಿ ಮಿಮ್ಸ್ ಬೋಧಕ ಆಸ್ಪತ್ರೆಗೆ 500 ಹಾಸಿಗೆಗಳ ಹೊಸ ಆಸ್ಪತ್ರೆಯ ನಿರ್ಮಾಣ ಕುರಿತು ಸರ್ಕಾರದ ನಿಲುವೇನು; ಈ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು) | ಮಿಮ್ಸ್ ಸಂಸ್ಥೆಯು ಈ ಹಿಂದೆ 450 ಹಾಸಿಗೆಗಳಿಗೆ ಅನುಮೋದನೆಯನ್ನು ಪಡೆದಿದ್ದು, ಸುಮಾರು 5 ವರ್ಷಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ದಾಖಲಾಗುತ್ತಿದ್ದು, ಸದರಿ ಆಸ್ಪತ್ರೆಯು ಪ್ರಸ್ತುತವಾಗಿ 850 ಹಾಸಿಗೆಗಳ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ.<br><br>ಈ ಸಂಬಂಧವಾಗಿ ಪರಿಸರ ಇಲಾಖೆಯ ಅನುಮತಿ ಪಡೆಯಲು ಕ್ರಮವಹಿಸಲಾಗುತ್ತಿದೆ. ಆದ್ದರಿಂದ ಮಿಮ್ಸ್ ಬೋಧಕ ಆಸ್ಪತ್ರೆಗೆ 500 ಹಾಸಿಗೆಗಳ ಹೊಸ ಆಸ್ಪತ್ರೆಯ ನಿರ್ಮಾಣದ ಕುರಿತಾದ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ:** ಎಂಇಡಿ 954 ಎಂಪಿಎಸ್ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.